ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ **ಎಸ್‌ವೈಎನ್** / ಅಸಾಮಾನ್ಯ ಸಭೆ/ 68 / 2019–20 ದಿನಾಂಕ: 18.01.2020.

ಗೆ,

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 10.01.2020 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: **10.01.2020** ರಂದು ಪೂರ್ವಾಹ್ನ 11–00 ಗಂಟೆಗೆ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು 18/1/2020

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY
Central College Campus, Dr. B.R. Ambedkar Veedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್/ಅಸಾಮಾ/68/2019–20** **ದಿನಾಂಕ: 17.01.2020.**

ದಿನಾಂಕ 10.01.2020 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎಸ್. ಜಾಫ್ಲೆಟ್, ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ: ಎಂ. ಪಾಂಡುರಂಗಪ್ಪ | ಸದಸ್ಯರು |
| 3. | ಡಾ: ಹೆಚ್.ಟಿ. ಅರವಿಂದ್ | ಸದಸ್ಯರು |
| 4. | ಡಾ. ಬಿ.ಎ. ಅನುರಾಧಾ | ಸದಸ್ಯರು |
| 5. | ಡಾ. ಆರ್. ಪಾರ್ವತಿ | ಸದಸ್ಯರು |
| 6. | ಡಾ. ಇ.ಬಿ.ರಾಜೇಶ್ | ಸದಸ್ಯರು |
| 7. | ಶ್ರೀ ಡಿ.ಜಿ. ಶ್ರೀನಿವಾಸಮೂರ್ತಿ | ಸದಸ್ಯರು |
| 8. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 9. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 10. | ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 11. | ಡಾ. ಆರ್.ಕೆ. ಚಂದ್ರನಾಥ್ | ಸದಸ್ಯರು |
| 12. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 13. | ಡಾ. ವಿ.ಆರ್. ದೇವರಾಜು | ಸದಸ್ಯರು |
| 14. | ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 15. | ಪ್ರೊ: ವಿ. ಶಿವರಾಂ, ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಎಲ್ಲಾ ಸದಸ್ಯರಿಗೆ ಸ್ವಾಗತ ಕೋರುತ್ತಾ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಂಡರು.

ಅ) ಸಭೆಯ ಪ್ರಾರಂಭದಲ್ಲಿ ಸದಸ್ಯರಾದ ಶ್ರೀ ಹರಿಪ್ರಸಾದ್ ರವರು ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಗಳ ಸಂ 5.18 ಪ್ರಸ್ತಾಪಿಸಿ, ಸದರಿ ಪರಿನಿಯಮಗಳ ಪ್ರಕಾರ ವಿಶೇಷ ಸಭೆ 7 ಜನ ಸದಸ್ಯರ ಮನವಿಯ ಮೇಲೆ ಕರೆಯಬೇಕಾಗುತ್ತದೆ ಮತ್ತು ಪರಿನಿಯಮ ಸಂ 5.1ರ ಪ್ರಕಾರ ಕುಲಪತಿಗಳು ಅಗತ್ಯಕ್ಕನುಗುಣವಾಗಿ ಅಸಾಮಾನ್ಯ ಸಭೆ ಕರೆಯ ಬಹುದಾಗಿದೆ, ಪ್ರಸ್ತುತ ಸಭೆ ವಿಶೇಷ ಸಭೆ ಎಂದು ನಮೂದಿಸಿರುವ ಕುರಿತು ವಿವರಣೆ ಕೋರಿದರು.

ಈ ಮೊದಲು ಅಸಾಮಾನ್ಯ ಸಭೆ ಎಂದು ನಮೂದಿಸಲಾಗುತ್ತಿತ್ತು ಸದಸ್ಯರಾದ ಶ್ರೀ ಹೆಚ್. ಆರ್. ಸತೀಶ್ ರವರು "ಅಸಾಮಾನ್ಯ" ಪದ ಅಷ್ಟೊಂದು ಸಮಂಜಸವಲ್ಲವೆಂದು ತಿಳಿಸಿ 'ವಿಶೇಷ ಸಭೆ' ಎಂದು ಕರೆಯಬೇಕೆಂದು ಪ್ರಸ್ತಾಪಿರುವ ಹಿನ್ನೆಲೆಯಲ್ಲಿ "ವಿಶೇಷ ಸಭೆ" ಎಂದು ನಮೂದಿಸಲಾಗಿದೆ. ಆದರೆ ಪರಿನಿಯಮದ ಪ್ರಕಾರ ಇದು "Extraordinary Meeting" ಆಗಿರುತ್ತದೆ, ಕಾರಣ "ಅಸಾಮಾನ್ಯ ಸಭೆ"ಎಂದು ನಮೂದಿಸಲಾಗುವುದೆಂದು ಕುಲಪತಿಗಳು ತಿಳಿಸಿದರು.

ಆ) ಡಾ.ಹೆಚ್.ಟಿ. ಅರವಿಂದ ಅವರು ನಿಯಮಾವಳಿಗಳ ಪ್ರಕಾರ ಹೆಚ್ಚುವರಿ ಅಜಂಡಾ ಸಭೆಯ ಪೂರ್ವದಲ್ಲಿ ನೀಡಬೇಕೆಂದು ಇದೆ. ಟೇಬಲ್ ಅಜೆಂಡಾ ಎನ್ನುವ ಪ್ರಸ್ತಾಪ ಪರಿನಿಯಮದಲ್ಲಿ ಇಲ್ಲಾ ಎಂದು ತಿಳಿಸಿದರು. ಡಾ. ಇ.ಬಿ.ರಾಜೇಶ್, ಶ್ರೀ ಡಿ.ಜಿ. ಶ್ರೀನಿವಾಸಮೂರ್ತಿ, ಡಾ. ಬಿ.ಎ. ಅನುರಾಧಾ ಹಾಗೂ ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ ಮುಂತಾದ ಸದಸ್ಯರು "ಟೇಬಲ್ ಅಜೆಂಡಾ" ಪದ ಬಳಕೆ ರೂಢಿಯಲ್ಲಿ ಬಂದಿದ್ದು, ಇದನ್ನು ಎಲ್ಲಾ ಶಾಸನಬದ್ಧ ಸಭೆಗಳಲ್ಲಿ ಉಪಯೋಗಿಸುತ್ತಾರೆ ಹಾಗಾಗಿ ಟೇಬಲ್ ಅಜೆಂಡಾ ಎಂದು ಕರೆಯುಬಹುದು ಎಂದು ಹೇಳಿದರು. ತುರ್ತು ವಿಷಯಗಳು ಇದ್ದಲ್ಲಿ ಅವುಗಳನ್ನು ಸಭೆಯ ಪ್ರಾರಂಭದಲ್ಲಿ ಸದಸ್ಯರಿಗೆ ನೀಡಲಾಗುವುದು ಎಂದು ಸಭೆಗೆ ತಿಳಿಸಲಾಯಿತು.

ಇ) ನಡಾವಳಿಗಳನ್ನು ಸದಸ್ಯರಿಗೆ ಕಳುಹಿಸಿದ 7 ದಿವಸಗಳಲ್ಲಿ ಆ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರಿಂದ ಆಕ್ಷೇಪಣೆಗಳು ಬಾರದಿದ್ದಲ್ಲಿ ಅವುಗಳನ್ನು ಧೃಢೀಕೃತ ನಡಾವಳಿಗಳೆಂದು ಪರಿನಿಯಮ 5.16ರಲ್ಲಿ ಇರುವುದರಿಂದ ಅದರಂತೆ, 7 ದಿನಗಳ ನಂತರ ನಡಾವಳಿಗಳ ಮೇಲೆ ಕ್ರಮ ಕೈಕೊಳ್ಳಬೇಕೆಂದು ಸದಸ್ಯರಾದ ಡಾ: ಅರವಿಂದ್ ಹೆಚ್.ಟಿ, ತಿಳಿಸಿರುವುದಕ್ಕೆ ಸಭೆ ಒಪ್ಪಿಗೆ ಸೂಚಿಸಿತು. ನಂತರ ಕಾರ್ಯಸೂಚಿ ಕೈಗೆತ್ತಿಕೊಳ್ಳಲಾಯಿತು.

| | |
|---|---|
| **ವಿಷಯ ಸಂಖ್ಯೆ– 1:** | ಹಿಂದಿ ಮತ್ತು ರಾಜ್ಯಶಾಸ್ತ್ರ ಪಠ್ಯವಿಷಯದ ಬದಲಾವಣೆ ಮತ್ತು ಮರುಪರೀಕ್ಷೆಗೆ ಅನುಮತಿ ಕೋರಿರುವ ಬಗ್ಗೆ.<br><br>ಕುಲಸಚಿವರು (ಮೌಲ್ಯಮಾಪನ) ರವರು 1. ರೇವಾ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್ 2. ಬೃಂದಾವನ ಮಹಾವಿದ್ಯಾಲಯ ಮತ್ತು 3. ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ಹೆಸರಘಟ್ಟ ವಿಷಯಕ್ಕೆ ಸಂಬಂಧಿಸಿದ ವಿವರಗಳನ್ನು ಸಭೆಗೆ ತಿಳಿಸಿದರು.<br><br>ಸದಸ್ಯರಾದ ಡಾ: ಅರವಿಂದ್, ಡಾ. ಬಿ.ಎ. ಅನುರಾಧಾ, ಡಾ. ಆರ್. ಪಾರ್ವತಿ, ಡಾ: ರಾಜೇಶ್, ಶ್ರೀ ಶ್ರೀನಿವಾಸಮೂರ್ತಿ, ಡಾ: ದೇವರಾಜು, ಶ್ರೀಮತಿ ಜ್ಯೋತಿ ವಿಜಯ್, ಶ್ರೀ ಚಂದ್ರನಾಥ್, ಶ್ರೀ ಶ್ರೀನಿವಾಸಯ್ಯ ಮುಂತಾದವರು ಚರ್ಚೆಯಲ್ಲಿ ಪಾಲ್ಗೊಂಡು ಇದು ಮಹಾವಿದ್ಯಾಲಯಗಳ ಬೇಜವಾಬ್ದಾರಿಯಿಂದ |

| | |
|---|---|
| | ಆಗಿದ್ದು, ಈ ಘಟನೆಗೆ ಮಹಾವಿದ್ಯಾಲಯದ ಪ್ರಾಚಾರ್ಯರು ಮತ್ತು ಸಂಬಂಧಿಸಿದ ಶಿಕ್ಷಕರು ಜವಾಬ್ದಾರರಾಗುತ್ತಾರೆ ಎಂದು ತಿಳಿಸಿದರು. ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಬೇರೆ ಎಲ್ಲಾ ಮಹಾವಿದ್ಯಾಲಯಗಳಿಗೆ ಪಠ್ಯಕ್ರಮದ ಬಗ್ಗೆ ತಿಳುವಳಿಕೆ ಇರುವಾಗ ಈ ಮೂರು ಮಹಾವಿದ್ಯಾಲಯಗಳು ಪಠ್ಯಕ್ರಮದ ಬಗ್ಗೆ ತಿಳಿದುಕೊಳ್ಳದೇ ಇರುವುದು ವಿಪರ್ಯಾಸಕರವೆಂದು ತಿಳಿಸಿದರು. ಈ ಮಹಾವಿದ್ಯಾಲಯಗಳಿಗೆ ಎಚ್ಚರಿಕೆ ನೀಡಬೇಕೆಂದು ಹಾಗೂ ಈ ಕುರಿತು ಎಲ್ಲಾ ಮಹಾವಿದ್ಯಾಲಯಗಳಿಗೆ ಸುತ್ತೋಲೆ ಹೊರಡಿಸಬೇಕೆಂದು ಹೇಳಿದರು.<br><br>**ಸಿಂಡಿಕೇಟ್ ನಿರ್ಣಯ:**<br><br>**The Syndicate resolved not to consider the request of the Colleges for conducting re-examination and to issue Notice to the Principals of these Colleges.**<br><br>**The Syndicate also resolved that, a Circular be issued to all the Colleges stating that in case of such negligence, the Principals of the concerned college will be held responsible.**<br><br>**The Syndicate resolved that, as and when the Syllabus is changed / modified, a Circular / Notification be sent to all Colleges by email in addition to uploading on Website.**<br>**The Syndicate further resolved that in future such matters shall be placed before the Academic Council.** |
| ವಿಷಯ ಸಂಖ್ಯೆ– 2: | ಬಿ.ಎಂ. ಪ್ರೀತು, ಬಿ.ಬಿ.ಎ 2ನೇ ಸೆಮೆಸ್ಟರ್, SSMRV ಕಾಲೇಜು, ಇವರ OMR ಕಳೆದಿರುವ ಕುರಿತು ರಚಿಸಲಾದ ಸಮಿತಿಯ ವರದಿ ಬಗ್ಗೆ.<br><br>ಕುಲಸಚಿವರು (ಮೌಲ್ಯಮಾಪನ) ರವರು ವಿಷಯವನ್ನು ಪ್ರಸ್ತಾಪಿಸಿ, ಉಪಸಮಿತಿಯ ಸದಸ್ಯರಾದ ಡಾ: ಹೆಚ್.ಟಿ. ಅರವಿಂದ್ ಅವರನ್ನು ವಿವರಗಳನ್ನು ಒದಗಿಸಲು ಕೋರಿದರು. ಅದರಂತೆ ಡಾ: ಅರವಿಂದ್ ಅವರು ವಿವರಣೆ ನೀಡಿ ದಾಖಲೆಗಳ ಪರಿಶೀಲನೆ ಹಾಗೂ ಸಂಬಂಧಿಸಿದ ವಿದ್ಯಾರ್ಥಿ, ಅಧ್ಯಾಪಕರು ಮತ್ತು ಪ್ರಾಂಶುಪಾಲರ ವಿಚಾರಣೆಯಿಂದ, ಮಹಾವಿದ್ಯಾಲಯದ ಹಂತದಲ್ಲಿ ಈ ತಪ್ಪು ಆಗಿರುವುದು ಕಂಡುಬರುತ್ತದೆ ಎಂದು ತಿಳಿಸಿದರು. ಸಮಿತಿ ಮಾಡಿರುವ 4 ಶಿಫಾರಸ್ಸುಗಳನ್ನು ಸಭೆಗೆ ಪ್ರಸ್ತುತ ಪಡಿಸಿದರು. |

ಸದಸ್ಯರಾದ ಡಾ. ಇ.ಬಿ.ರಾಜೇಶ್ ರವರು ಚರ್ಚೆಯಲ್ಲಿ ಪಾಲ್ಗೊಂಡು ಉಪಸಮಿತಿ ನಿರ್ವಹಿಸಿದ ಕಾರ್ಯ ಹಾಗೂ ವಿವರವಾದ ವರದಿ ಸಲ್ಲಿಸಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಆರ್ಡಿನೆನ್ಸ್ ಪ್ರಕಾರ ರೂ.5,000/–ಗಳ ದಂಡ ವಿಧಿಸಲು ಸಿಂಡಿಕೇಟ್ ಸಭೆಗೆ ವಿನಂತಿಸಿದರು.

ಸದಸ್ಯರಾದ ಡಾ: ಅರವಿಂದ್ ಹಾಗೂ ಶ್ರೀ ಶ್ರೀನಿವಾಸಯ್ಯ ನವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಪರೀಕ್ಷಾ ಕೈಪಿಡಿ ಪ್ರಕಾರ ದಂಡ ವಿಧಿಸುವ ಅಧಿಕಾರ ಸಂಬಂಧಪಟ್ಟ ಉಪಸಮಿತಿಯ ವಿವೇಚನೆಗೆ ಒಳಪಟ್ಟಿರುತ್ತದೆ ಎಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ:**

ಸಿಂಡಿಕೇಟ್ ಉಪ ಸಮಿತಿಯ ವರದಿಗೆ ಒಪ್ಪಿಗೆ ನೀಡಿ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಯಿತು.

1. ವಿದ್ಯಾರ್ಥಿಯು ಪರೀಕ್ಷೆಗೆ ಹಾಜರಾಗಿರುವುದು ದಾಖಲೆಗಳಿಂದ ಖಾತ್ರಿಯಾಗಿರುವುದರಿಂದ ವಿದ್ಯಾರ್ಥಿಯ ಹಿತದೃಷ್ಟಿಯಿಂದ, ವಿದ್ಯಾರ್ಥಿಯಿಂದ ಯಾವುದೇ ಪರೀಕ್ಷಾ ಶುಲ್ಕವನ್ನು ಪಡೆಯದೆ ಮತ್ತು ಪುನರಾವರ್ತಿತ (Repeater) ವಿದ್ಯಾರ್ಥಿಯೆಂದು ಪರಿಗಣಿಸದೆ, ಮತ್ತೊಮ್ಮೆ ಈ ವಿದ್ಯಾರ್ಥಿಗೆ ಮರು ಪರೀಕ್ಷೆಯನ್ನು ನಡೆಸಿ ಅಂಕ ಪಟ್ಟಿಯನ್ನು ವಿತರಿಸಲು ತೀರ್ಮಾನಿಸಲಾಯಿತು.
2. ಕಾಲೇಜಿನ ಸಿಬ್ಬಂದಿ ತೋರಿರುವ ನಿರ್ಲಕ್ಷ್ಯತನಕ್ಕೆ ವಿದ್ಯಾರ್ಥಿ ಮತ್ತು ವಿಶ್ವವಿದ್ಯಾಲಯ ತೊಂದರೆಗೆ ಸಿಲುಕಿರುವುದನ್ನು ಗಮನಿಸಿ,ಇನ್ನು ಮುಂದೆ ಇಂತಹ ಪ್ರಕರಣಗಳು ನಡೆಯದಂತೆ ತಡೆಯಲು ಕಾಲೇಜಿಗೆ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಪರೀಕ್ಷಾ ಕೈಪಿಡಿ 2018 ರ ಕಲಂ 75ರ ಪ್ರಕಾರ ರೂ.25,000/–(ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ) ದಂಡ ವಿಧಿಸಲು ಸಮಿತಿ ಮಾಡಿದ ಶಿಫಾರಸ್ಸನ್ನು ಒಪ್ಪಿಕೊಳ್ಳಲಾಯಿತು.
3. ಇಂತಹ ಪ್ರಕರಣಗಳು ಜರುಗದಂತೆ ಎಚ್ಚರಿಕೆ ವಹಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ತಿಳಿಸುವ ಮತ್ತು ಒಂದು ವೇಳೆ ಇಂತಹ ಪ್ರಕರಣಗಳು ಜರುಗಿದರೆ ಅದಕ್ಕೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು/ಮುಖ್ಯ ಪರೀಕ್ಷಾ ವ್ಯವಸ್ಥಾಪಕರನ್ನೆ ಹೊಣೆಗಾರರನ್ನಾಗಿ ಮಾಡಿ ಪರೀಕ್ಷಾ ಕೇಂದ್ರವನ್ನು ರದ್ದುಪಡಿಸಲಾಗುವುದೆಂದು ತಿಳಿಸುವ ಸುತ್ತೋಲೆಯನ್ನು ಎಲ್ಲಾ ಕಾಲೇಜುಗಳಿಗೆ ಕಳುಹಿಸಲು ತೀರ್ಮಾನಿಸಲಾಯಿತು.

| | |
|---|---|
| | 4. ಎಲ್ಲಾ ಕಾಲೇಜುಗಳು ಪರೀಕ್ಷಾ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿ ಅಲ್ಲಿ CCTVಯನ್ನು ಅಳವಡಿಸಿಕೊಳ್ಳಲು ಮಹಾವಿದ್ಯಾಲಯಗಳು ಅಗತ್ಯ ಕ್ರಮ ಕೈಕೊಳ್ಳಬೇಕೆಂದು ಸೂಚಿಸಲಾಯಿತು. |
| ವಿಷಯ ಸಂಖ್ಯೆ- 3: | ರಜಾ ಅವಧಿಯಲ್ಲಿ ಆಡಳಿತಾತ್ಮಕ ಕಾರ್ಯ ನಿರ್ವಹಿಸುತ್ತಿರುವ ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರಿಗೆ ನಿಗದಿತ ಸಂಭಾವನೆ ನೀಡುವ ಕುರಿತು<br><br>ಸಮಾಜ ವಿಜ್ಞಾನ ಹಾಗೂ ಬಾಷೆ ವಿಷಯಗಳ ಸ್ನಾತಕೋತ್ತರ ವಿಭಾಗಗಳು ಕಳೆದ ವರ್ಷ ಪ್ರಾರಂಭವಾಗಿದ್ದು, ಈ ವಿಭಾಗಗಳಿಗೆ ಖಾಯಂ ಅಧ್ಯಾಪಕರು ಇರುವುದಿಲ್ಲ. ಅತಿಥಿ ಉಪನ್ಯಾಸಕರಿಂದ ಪಾಠ ಪ್ರವಚನಗಳು ನಡೆಯುತ್ತಿವೆ. ಸದರಿ ವಿಭಾಗಗಳ ಪರೀಕ್ಷೆ ಹಾಗೂ ಪ್ರವೇಶಗಳಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಈ ಅತಿಥಿ ಉಪನ್ಯಾಸಕರು ರಜಾ ಅವಧಿಯಲಿ ನಿರ್ವಹಿಸಿರುವುದರಿಂದ ಅವರಿಗೆ ಪೂರ್ಣಾವಧಿ ಅತಿಥಿ ಉಪನ್ಯಾಸಕರಿಗೆ ನೀಡುವ ರೂ.50,000/- ಗಳ ಬದಲಿಗೆ ರೂ.30,000/- ಸಂಭಾವನೆ ನೀಡಲು ಕುಲಪತಿಗಳು ಸಿಂಡಿಕೇಟ್ ಅನುಮೋದನೆ ಕೋರಿದರು.<br><br>ಸದಸ್ಯರಾದ ಡಾ. ಇ.ಬಿ.ರಾಜೇಶ್ ರವರು ವಿಶ್ವವಿದ್ಯಾಲಯದ ಹೆಚ್ಚಿನ ವಿಭಾಗಗಳಲ್ಲಿ ಖಾಯಂ ಉಪನ್ಯಾಸಕರು ಇಲ್ಲದಿರುವ ಕಾರಣ. ಆಡಳಿತ, ಪರೀಕ್ಷಾ, ಪ್ರವೇಶ ಇತ್ಯಾದಿ ಕೆಲಸಗಳು ಅತಿಥಿ ಉಪನ್ಯಾಸಕರ ಮೇಲೆ ಅವಲಂಬಿತವಾಗಿವೆ. ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಕಾರ್ಯಗಳನ್ನು ಸುಗಮವಾಗಿ ನಡೆಸಲು ಕುಲಪತಿಗಳು ಅಗತ್ಯ ನಿರ್ಧಾರಗಳನ್ನು ಕೈಕೊಳ್ಳಬೇಕಾಗುತ್ತದೆ. ಈ ಅತಿಥಿ ಉಪನ್ಯಾಸಕರು ರಜಾ ಅವಧಿಯಲ್ಲಿ ಕೆಲಸ ಮಾಡಿರುವುದರಿಂದ ಅವರಿಗೆ ಸಂಭಾವನೆ ಪಾವತಿಸಬೇಕಾಗುತ್ತದೆ ಎಂದು ತಿಳಿಸಿದರು.<br><br>ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಅತಿಥಿ ಉಪನ್ಯಾಸಕರಿಂದ ಕೆಲಸ ಪಡೆದ ನಂತರ ವಿಷಯ ಸಿಂಡಿಕೇಟ್ ಸಭೆಗೆ ತಂದಿರುವುದು ಸರಿಯಲ್ಲ. ಈ ಕುರಿತು ನಿಯಮಾವಳಿಗಳು ಇದ್ದಲ್ಲಿ ಸಭೆಗೆ ಮಂಡಿಸಬೇಕೆಂದು ತಿಳಿಸಿದರು. Ph.D ಪದವಿ ಹೊಂದಿದ ಶಿಕ್ಷಕರಿಂದ ಆಡಳಿತಾತ್ಮಕ ಕೆಲಸ ನಿರ್ವಹಣೆ ಸರಿಯಲ್ಲ ಎಂದು ತಿಳಿಸಿದರು.<br><br>ಸದಸ್ಯರಾದ ಡಾ: ಅರವಿಂದ್ ರವರು ಚರ್ಚೆಯಲ್ಲಿ ಭಾಗವಹಿಸಿ, ಅತಿಥಿ ಉಪನ್ಯಾಸಕರನ್ನು ಯುಜಿಸಿ ನಿಯಮ ಮತ್ತು ಕರ್ನಾಟಕ ಸರ್ಕಾರದ ಆದೇಶಗಳ ಮೇರೆಗೆ 10 ತಿಂಗಳ ಅವಧಿಗೆ ನೇಮಕ ಮಾಡಬೇಕಾಗುತ್ತದೆ ಎಂದು ತಿಳಿಸಿದರು. ಅವರನ್ನು ರಜಾ ಅವಧಿಯಲ್ಲಿ ಮುಂದುವರೆಸಲು ಅವಕಾಶವಿರುವುದಿಲ್ಲ, ಅಲ್ಲದೆ, ಅವರು ನಿರ್ವಹಿಸುವ ಪಾಠ ಪ್ರವಚನಗಳಿಗೆ ಸಂಭಾವನೆ ನಿಗದಿಯಾಗಿದೆ. ರಜಾ ಅವಧಿಯಲ್ಲಿ ಯಾವುದೇ ಪಾಠ ಪ್ರವಚನ ಇಲ್ಲದಿರುವುದರಿಂದ ಸಂಭಾವನೆ ನೀಡಲು ಬರುವುದಿಲ್ಲ. ಒಂದು ವೇಳೆ ಈ ರಜಾ ಅವಧಿಗೆ ಸಂಭಾವನೆ ನೀಡುವ ಅಗತ್ಯ ಕಂಡು ಬಂದರೆ |

| | |
|---|---|
| | ಅದಕ್ಕೆ ಪ್ರತ್ಯೇಕವಾದ ನಿಯಮಾವಳಿಗಳನ್ನು ರಚಿಸಿ ವಿಶ್ವವಿದ್ಯಾಲಯದ ಆಯವ್ಯಯ ಪತ್ರದಲ್ಲಿ ಅವಕಾಶ ಕಲ್ಪಿಸಬೇಕಾಗುತ್ತದೆ ಎಂದು ತಿಳಿಸಿದರು.<br><br>ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ ನವರು ಮಾತನಾಡಿ, ಅತಿಥಿ ಉಪನ್ಯಾಸಕರಿಗೆ, ಜವಾಬ್ದಾರಿಯತ ಪರೀಕ್ಷಾ ಹಾಗೂ ಆಡಳಿತದ ಕೆಲಸಗಳನ್ನು ನೀಡಿದರೆ, ಅದಕ್ಕೆ ಹೊಣೆಗಾರಿಕೆ ನಿಗದಿಪಡಿಸುವುದು ಕಷ್ಟವಾಗುತ್ತದೆ ಎಂದು ತಿಳಿಸಿದರು.<br><br>ಸದಸ್ಯರಾದ ಡಾ: ಆರ್.ಕೆ. ಚಂದ್ರನಾಥ್ ರವರು ಪಾಠ ಪ್ರವಚನ ಮಾಡಲು ಸೀಮಿತ ಸಂಭಾವನೆ ಪಡೆಯುವ ಅತಿಥಿ ಉಪನ್ಯಾಸಕರು ರಜಾ ಅವಧಿಯಲ್ಲಿ ವಿಭಾಗಕ್ಕೆ ಸಂಬಂಧಿಸಿದ ಕೆಲಸ ನಿರ್ವಹಿಸಿರುವುದಕ್ಕೆ ಸಂಭಾವನೆ ನೀಡಲು ಪರಿಗಣಿಸಬೇಕು. ಅವರು ಪ್ರತಿ ತಿಂಗಳು ಪಡೆಯುವ ಸಂಭಾವನೆಯ ದರದಂತೆ ರಜಾ ಅವಧಿಯಲ್ಲಿಯೂ ನೀಡಲು ಒಂದು Policy ತೀರ್ಮಾನ ಕೈಕೊಳ್ಳಬೇಕೆಂದು ಹೇಳಿದರು.<br><br>ಸದಸ್ಯರಾದ ಶ್ರೀ ಹೆಚ್.ಎನ್. ಹರಿಪ್ರಸಾದ ರವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕರಣ 15(5) ರ ಅವಕಾಶಗಳನ್ನು ವಿವರಿಸಿ, ಕುಲಪತಿಗಳು ತುರ್ತು ಸಂದರ್ಭದಲ್ಲಿ ಕೈಕೊಂಡ ತೀರ್ಮಾನವನ್ನು ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಬಹುದು ಎಂದು ತಿಳಿಸಿದರು.<br><br>ಅಂತಿಮವಾಗಿ ಕುಲಪತಿಗಳು, ಯುಜಿಸಿ ನಿಯಮಗಳಂತೆ ಒಟ್ಟು ಹುದ್ದೆಗಳ 20% ಹುದ್ದೆಗಳಿಗೆ ಅತಿಥಿ ಉಪನ್ಯಾಸಕರ ಸೇವೆ ಪಡೆಯಲು ಅವಕಾಶವಿದೆ. ಆದರೆ ನಮ್ಮಲ್ಲಿ ಇದುವರೆಗೆ ಹುದ್ದೆಗಳು ಇರಲಿಲ್ಲ. ಈಗ ಸರ್ಕಾರ ಪ್ರತಿ ವಿಭಾಗಕ್ಕೆ ಹುದ್ದೆಗಳನ್ನು ಮಂಜೂರಿಸಿದೆ. ಹುದ್ದೆಗಳು ಭರ್ತಿಯಾಗುವವರೆಗೆ ಹೊಸ ವಿಭಾಗಗಳು ಅತಿಥಿ ಉಪನ್ಯಾಸಕರ ಮೇಲೆ ಅವಲಂಬಿತವಾಗಿದೆ. ಸಂಚಿತ ವೇತನದ ಮೇಲೆ ಸೇವೆ ಸಲ್ಲಿಸುತ್ತಿರುವ ಶಿಕ್ಷಕೇತರ ಸಿಬ್ಬಂದಿಗಳಿಗೆ ಅನುಭವವಿಲ್ಲದ ಕಾರಣ ಹಾಗೂ ಹುದ್ದೆಗಳ ಕೊರತೆಯಿಂದಾಗಿ ಅತಿಥಿ ಉಪನ್ಯಾಸಕರಿಂದ ಮೇಲೆ ಹೇಳಿದ ಕೆಲಸ ನಿರ್ವಹಿಸಲಾಗಿದೆ. ಅವರಿಗೆ ನೀಡಿರುವ ಆದೇಶಕ್ಕೆ ಘಟನೋತ್ತರ ಅನುಮೋದನೆ ನೀಡಬೇಕೆಂದು ಕೋರಿದರು.<br><br>ಸಿಂಡಿಕೇಟ್ ನಿರ್ಣಯ:<br><br>**ಈ ಕುರಿತು ಪರಿಶೀಲಿಸಿ ವರದಿ ಸಲ್ಲಿಸಲು ಕೆಳಕಂಡ ಸದಸ್ಯರ ಸಮಿತಿಯನ್ನು ರಚಿಸಲಾಯಿತು:**<br>1) **ಕುಲಸಚಿವರು**<br>2) **ವಿತ್ತಾಧಿಕಾರಿಗಳು**<br>3) **ಡಾ: ಆರ್.ಕೆ. ಚಂದ್ರನಾಥ್**<br>4) **ಶ್ರೀ ಹೆಚ್.ಎನ್. ಹರಿಪ್ರಸಾದ**<br>5) **ಕಾನೂನು ಸಲಹೆಗಾರರು.** |

| | |
|---|---|
| ವಿಷಯ ಸಂಖ್ಯೆ- 4: | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿವಿಧ ಚಟುವಟಿಕೆಗಳಿಂದ ಸಂದಾಯವಾಗುವ ವಿವಿಧ ರಾಜಸ್ವ ಬಂಡವಾಳ ಸ್ವೀಕೃತಿಗಳನ್ನು ಸರ್ಕಾರ ಹೊರಡಿಸಿರುವ ವಿವಿಧ ಆದೇಶಗಳ ನಿಯಮಾನುಸಾರ ಬ್ಯಾಂಕ್‌ಗಳಲ್ಲಿ ನಿಶ್ಚಿತ ಬಂಡವಾಳ ಹೂಡಿಕೆ ಮಾಡುವ ಬಗ್ಗೆ<br><br>**ಸಿಂಡಿಕೇಟ್ ನಿರ್ಣಯ:**<br><br>**ಸರ್ಕಾರದ ಆದೇಶದ ಪ್ರಕಾರ ಹೆಚ್ಚುವರಿ ಆದಾಯವನ್ನು ನಿಯಮಾನುಸಾರ ನಿಶ್ಚಿತ ಬಂಡವಾಳ ಹೂಡಿಕೆ ಮಾಡಲು ಅನುಮೋದನೆ ನೀಡಲಾಯಿತು.** |
| ವಿಷಯ ಸಂಖ್ಯೆ- 5: | Reports of the Committees constituted for renewal of recognition of Research Centres in the Faculties of Commerce and Education<br><br>Sri. T.H. Srinivasaiah and Dr. H.T. Aravind, Members informed that as per the proceedure of Bangalore University, the Committees are to be headed by a former Vice-Chancellor and Subject Experts, whereas in the present case, the Committees are headed by the Deans.<br><br>Smt. Jyothi Vijay, Member has made a comparative study of the reports submitted by the Commerce and Management Committees. The reports of the Committees are subjective in nature and gave comparative details of Govt. RC College with KLE's S. Nijalingappa College and St. Joseph's College of Commerce with Seshadripuram Institute of Management Studies. She also said that the format designed does not ellicit a comprehensive information. The parameters are not systematicaly incorporated. We may have to design an online format for Research Centres along with the Formats being designed for LIC of affiliated / new Colleges. Dr. Aravind, Member, cited the instance of Maharani Lakshmi Ammani Women's College.<br><br>Dr. B.A. Anuradha, Member has mentioned that Research Centres are social investment. Fees fixed by the University is kept at minimum. Research need to be encouraged in higher education.<br><br>Mr. Thomas Neeliyara, Member while participating in the discussion has said that a new format is to be designed and suggested to constitute new Committees for inspection. |

| | |
|---|---|
| | Dr. Pandurangappa, Member informed that, admission for Ph.D programmes in Arts, Science and Education have been completed as per the Notification issued and seats are filled against the available vacancies. Commerce & Management admissions are not done, aspiring students are approaching the University with a request to take up admission process. Students are to be selected against the vacant seats available with the existing recognised guides. The renewal of Research Centres need to be considered in this background. He also informed that a student has represented for reservation under 371(j) in History Department. Clarification has been sought from the Government in this regard.<br><br>**Resolution:**<br><br>**(1) The Syndicate resolved to standardise the tools including all the parameters for both fresh as well as renewal of recognition of Research Centres.**<br>**(2) Further resolved to include the following members to the Committee approved by the Syndicate in its meeting held on 23.12.2019, to verify the software and the parameters involved therein to evaluate the existing tool for digitization of the affiliation process and exploration of a suitable IT services solutions for the same.**<br>**1. Prof. H.A. Ranganath, Former Vice-Chancellor, Bangalore University**<br>**2. Dr. R.K. Chandranath, Syndicate Member**<br>**3. Dr. Ereshi, Former Professor of Commerce, BUB.**<br><br>**After designing the format the same to be placed before the Academic Council and Syndicate for approval and implementation.**<br>(3) **In view of the above observations the Syndicate resolved to reject the reports of the Committees constituted for renewal of recognition of Research Centres** |
| ವಿಷಯ ಸಂಖ್ಯೆ- 6: | ವಿಶ್ವವಿದ್ಯಾಲಯದ ಕ್ರಿಕೆಟ್ ಹಾಗೂ ಇತರೆ ಮೈದಾನಗಳನ್ನು ಕೆಲವು ಸಂಸ್ಥೆಗಳು ಬಾಡಿಗೆ ಪಡೆದು ತರಬೇತಿಗೆ ಬರುವ ಕ್ರೀಡಾ ಪಟುಗಳಿಂದ ಹೆಚ್ಚಿನ ಹಣ ಪಡೆಯುತ್ತಿರುವುದರ ಕುರಿತು ವಿವರಣೆ. |

| | |
|---|---|
| | ಕಳೆದ ಸಿಂಡಿಕೇಟ್ ಸಭೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್. ಆರ್. ಸತೀಶ್ ರವರು, ವಿಶ್ವವಿದ್ಯಾಲಯದ ಕ್ರಿಕೆಟ್ ಹಾಗೂ ಇತರೆ ಮೈದಾನಗಳನ್ನು ಕೆಲವು ಸಂಸ್ಥೆಗಳು ಬಾಡಿಗೆ ಪಡೆದು ತರಬೇತಿಗೆ ಬರುವ ಕ್ರೀಡಾ ಪಟುಗಳಿಂದ ಹೆಚ್ಚಿನ ಹಣ ಪಡೆಯುತ್ತಿರುವ ಕುರಿತು ಪ್ರಸ್ತಾಪಿಸಿರುವ ಹಿನ್ನೆಲೆಯಲ್ಲಿ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ ಎಂದು ಕುಲಪತಿಗಳು ಸಭೆಗೆ ತಿಳಿಸಿದರು. ಸದಸ್ಯರು ಕೇಳಿದ ಹಲವಾರು ಮಾಹಿತಿಗಳನ್ನು ನೀಡಲಾಯಿತು. ವಿಶ್ವವಿದ್ಯಾಲಯದ ಕ್ರಿಕೆಟ್ ಹಾಗೂ ಇತರೆ ಮೈದಾನಗಳಿಗೆ ಕೆಲವು ಮೂಲಭೂತ ರಿಪೇರಿ ಮತ್ತು ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ಈ ಕುರಿತು ಪರಿಶೀಲಿಸಲು ಒಂದು ಸಿಂಡಿಕೇಟ್ ಉಪ ಸಮಿತಿ ರಚಿಸಿ ಅಗತ್ಯವಾದ ರಿಪೇರಿ, ಸೌಲಭ್ಯ ಹಾಗೂ ಅವುಗಳ ಉಪಯೋಗಕ್ಕೆ ನಿಗದಿಪಡಿಸಬೇಕಾದ ಶುಲ್ಕ ಕುರಿತು ವರದಿ ಪಡೆದು ಕ್ರಮ ಕೈಕೊಳ್ಳಬಹುದೆಂದು ತಿಳಿಸಿದರು.<br><br>ಸಿಂಡಿಕೇಟ್ ನಿರ್ಣಯಸ:<br><br>**ವಿಶ್ವವಿದ್ಯಾಲಯದ ಕ್ರಿಕೆಟ್ ಹಾಗೂ ಇತರೆ ಮೈದಾನಗಳ ಅಗತ್ಯ ರಿಪೇರಿ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕುರಿತು ಹಾಗೂ ಮೈದಾನಗಳನ್ನು ಬಾಡಿಗೆ ನೀಡಲು ವಿಧಿಸಲಾಗುವ ಶುಲ್ಕ ಕುರಿತು ಪರಿಶೀಲಿಸಿ ತಾಂತ್ರಿಕ ಮತ್ತು ವಾಣಿಜ್ಯ ನಿಬಂಧನೆಗಳ (Technical & Commercial terms) ವರದಿ ಸಲ್ಲಿಸಲು ಕೆಳಕಂಡ ಸದಸ್ಯರ ಸಮಿತಿ ರಚಿಸಲು ತೀರ್ಮಾನಿಸಲಾಯಿತು.**<br><br>**1. ಶ್ರೀ ಹೆಚ್. ಆರ್. ಸತೀಶ — ಅಧ್ಯಕ್ಷರು**<br>**2. ಶ್ರೀ ಥಾಮಸ್ ನೀಲಿಯಾರ — ಸದಸ್ಯರು**<br>**3. ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ — ಸದಸ್ಯರು**<br>**4. ಶ್ರೀ ಹೆಚ್. ಎನ್. ಹರಿಪ್ರಸಾದ — ಸದಸ್ಯರು**<br>**5. ದೈಹಿಕ ಶಿಕ್ಷಣ ನಿರ್ದೇಶಕರು — ಸಂಚಾಲಕರು** |
| ವಿಷಯ ಸಂಖ್ಯೆ– 7: | ಸರ್ಕಾರದ ಆದೇಶ ದಿನಾಂಕ 07.11.2019 ಅನುಸಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ರಾಜ್ಯ ಲೆಕ್ಕ ಪತ್ರ ಹಾಗೂ ಪರಿಶೋಧನಾ ಇಲಾಖೆಯಿಂದ ನಿಯೋಜನೆ ಮೇಲೆ ನೇಮಿಸಿಕೊಳ್ಳಲು ಕುರಿತು<br><br>ಸಿಂಡಿಕೇಟ್ ನಿರ್ಣಯ:<br><br>**ದಿನಾಂಕ 07.11.2019ರ ಸರ್ಕಾರದ ಆದೇಶ ಅನುಸಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಒಬ್ಬ ವೈದ್ಯಾಧಿಕಾರಿ ಹಾಗೂ ಒಬ್ಬ ಶುಶ್ರೂಷಕಿ ಮತ್ತು ರಾಜ್ಯ ಲೆಕ್ಕ ಪತ್ರ ಹಾಗೂ ಪರಿಶೋಧನಾ ಇಲಾಖೆಯಿಂದ ಒಬ್ಬ ಆಡಿಟ್ ಅಧಿಕಾರಿ, ಒಬ್ಬ ಲೆಕ್ಕ ಅಧೀಕ್ಷಕರು, ಒಬ್ಬ ಲೆಕ್ಕ ಸಹಾಯಕ** |

| | |
|---|---|
| | ಸಿಬ್ಬಂದಿಗಳ ಸೇವೆಯನ್ನು ನಿಯೋಜನೆ ಮೇಲೆ ಪಡೆಯಲು ಸಿಂಡಿಕೇಟ್ ಸಭೆ ಅನುಮೊದನೆ ನೀಡಿತು. |
| ವಿಷಯ ಸಂಖ್ಯೆ– **8**: | To consider transfer of Ms. Vani T.S who has been admitted to 1st Semester MA (English) to be transferred to 1st Semester MA(Economics).<br><br>Mrs. Jyothi Vijay, Dr. B.A. Anuradha, Dr. R. Parvathi, Dr. H.T. Arvind, Sri Thomas Neeliyara, Sri. T. H. Srinivasiah, Dr. R.K. Chandranath and Sri. D.G. Srinivasamurthy participated in the discussion and expressed their views. The members expressed that, since the candidate is not eligible for admission to M.A. English and also she has not applied for M.A. Economics.<br><br>**Resolution:**<br><br>**After discussion, the Syndicate resolved not to consider the proposal for transfer of Ms. Vani. T. S. from I Sem M.A English to I Sem M.A Economics.** |
| ವಿಷಯ ಸಂಖ್ಯೆ– **9**: | Remuneration for Guest Faculty of Centre for Global Languages of Bengaluru Central University.<br><br>Members wanted to know the details of receipts and expenditure of the fees collected by the Centre for Global Languages. Dr. Jyothi Venkatesh, Co-ordinator of the Centre was invited to the meeting to present the details. Accordingly the Co-ordinator presented the details regarding courses offered, students' strength for each course, fees structure for different courses and also Receipts and Expenditure for the year 2019-20. It was also brought to the notice of the Syndicate that, the UGC does not conduct NET in Foreign Languages and it is very difficult to get Ph.D. degree holders in the foreign languages offered.<br><br>**Resolution:**<br><br>**After noting the details of receipts of expenditure presented by the Co-ordinator and non availability of NET/SLET and Ph.D. degree holders, the Syndicate resolved to approve for payment of remuneration at ₹ 1000/- per hour for each Guest Faculty who do not possess SLET/ NET/ Ph.D in respect of Centre for Global Languages.** |

| | |
|---|---|
| | **The Syndicate further resolved that, this resolution shall not be construed as a precedent for other departments.** |
| ವಿಷಯ ಸಂಖ್ಯೆ– 10: | Skill Augmentation and Employability Platform – reg<br><br>The Vice- Chancellor explained the proposal and informed that, the firm has come forward to provide industry connect employability platform and services to the students free of cost. He also informed that, the VTU has already signed an MOU with this firm. Apart from the free services the firm proposes to provide additional services to the interested students on payment basis<br><br>Dr.B.A. Anuradha, Dr. R. Parvathi participating in the discussion informed that nothing comes free, the data base collected from Colleges / University will be used for commercial purpose. Further the Government has several Skill augmentation / Development programmes and suggested to take feed-back from VTU.<br><br>Smt. Jyoyhi Vijay, participating in the discussion shared her Corporate relation experience. Up-skilling should be taken up as a customised approach rather than massification. This scheme may be considered initially for Arts and Science students of BCU rather than to the students of Affiliated colleges. She further stated that, the faculty of the University have to be consulted before taking up this.<br><br>Dr. Pandurangappa and Dr. Devaraj participating in the discussion stated that, the basic requirement of the Departments such as Internet, Computers and minimum staff need to be provided.<br><br>**Resolution:**<br><br>**After discussion the Syndicate resolved not to consider the proposal of Skill Augmentation and Employability platform submitted by M/s HED Express Pvt. Ltd** |

| ವಿಷಯ ಸಂಖ್ಯೆ– 11: | 2019–2020 ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಮಂಡಳಿಯನ್ನು ರಚಿಸಿರುವ ಬಗ್ಗೆ ಘಟನೋತ್ತರ ಅನುಮೋದನೆ ಕುರಿತು |
|---|---|
| | The Registrar (Evaluation) Incharge informed that, the Syndicate in its meeting held on 19.10.2019 has considered the submission made by earlier Registrar (Evaluation) regarding constitution of Board of Examiners in various subjects in view of fast approaching of examinations and shortage of time. The Syndicate has given approval and instructed to place the details in the next meeting for ratification. Accordingly the matter is placed<br><br>Members wanted to know the procedure followed in the constituting BOE. Accordingly, the Registrar (Evaluation) Incharge explained that the Board of Studies shall have powers to prepare the Panel of Examiners and to recommend constitution of BOE, to appointment paper setters and examiners in respective subjects.<br><br>Dr. H.T. Aravind informed that there are some discrepancies of ignoring seniority and cited the example of BoE in Hotel Management. Dr. B.A. Anuradha, pointed out that, the constitution of BoE in Management is not according to seniority and suggested that the BoS has to go with seniority. Since the BoEs have already been finalised, at least in future proper guidelines should be made available to the BoS. Dr. R.K. Chandranath, informed that since the process has already started, we have to approve the proposal and allow the Registrar (Evaluation) to go ahead. Mrs. Jyothi Vijay cited the instance of MMS courses of the Commerce faculty. Though this is a separate course, there is no separate panel and it is learnt that the BoS Chairman has informed to use the M.Com panel for MMS course. It is perplexing to note how a Commerce Teacher would be examiner for MMS Course. She further suggested that, the Statute Drafting Committee may have to look into this and come out with a comprehensive guidelines for BoS.<br><br>Dr.H.T. Aravind mentioned about the constitution of PG. Kannada BoE. He informed that, Prof. Muniyappa of B.U was earlier appointed as Chairman of PG BOE in Kannada and subsequently this order was withdrawn and some other person is appointed as Chairman. He wanted to know the details. |

| | |
|---|---|
| | The Registrar (Evaluation) Incharge explained the details and stated that this has happened before he took over the charge as Registrar (Evaluation). The Vice- Chancellor further informed that, Dr. Muniyappa was appointed as Chairman based on the recommendation of the Dean, Faculty of Arts, and the BoS Chairman has not attended the meeting.<br>Subsequently, the Chairman of BoS in Kannada P.G has brought to the notice that the BoE Chairman and Members are not appointed from the recommended list of the Board of Studies. Then, the file was called and verified, it is noticed that, the names of the Chairman and members appointed, are not within the Panel of Examiners recommended by BOS. In view of this, the earlier appointment order of BoE was withdrawn and afresh order is issued as per the recommendation of the BoS. As already clarified the Board of Studies is the competent authority for preparation of panel of Examiners and recommending BoE.<br><br>Members suggested that the Panel of Examiners should be prepared and BoE are to be constituted well in advance.<br><br>**Resolution:**<br><br>**After detailed discussion, the Syndicate resolved to ratify the constitution of the BoEs. The Registrar (Evaluation) is requested to verify regarding PG BoE in Kannada.** |
| ವಿಷಯ ಸಂಖ್ಯೆ– 12: | Instituting Five Post Graduate Departments in Bengaluru Central University.<br><br>Members Congratulated the Vice-Chancellor and other officers and thanked the Government of Karnataka for sanctioning the new Post Graduate Departments and teaching Posts.<br><br>Dr. H. T. Aravind informed that, the Syndicate has given in principle approval for starting new P.G Department of Law and Public Policy, appointment of Co-ordinator and starting of U.G Law Courses with a view to revive the old Law College, and considering the availability of Courts, Tribunals and High Courts in the vicinity of the University. However, other courses are good to experiment in National Institutes and Central Universities. This is a traditional University and starting of remaining 4 new courses are to be considered only after assessing the course contents, eligibility for admission and expertise for teaching etc. |

| | |
|---|---|
| | Dr. Anuradha mentioned that, since the Government of Karnataka has already permitted to start the departments and to fill-up the posts we have to go ahead with appointment of Co-ordinators so that, he will prepare a feasibility report which could be considered by the Syndicate.<br><br>Smt. Jyothi Vijay suggested to undertake a detailed and comprehensive market Research study in the areas and make a systematic study of demand for these courses from the students of the feeder areas.<br><br>Mr. Thomas Neeliyara suggested that the proposed new courses are good and are potential. The Syndicate may permit to appoint co-ordinators. Mr. Hariprasad informed that the expertise is available for Law courses; hence P.G Course in Law and Public Policy could be started.<br><br>Dr. R.K. Chandranath mentioned that, Environment and Climate Change is a subject of present day relevance and congratulated the Vice Chancellor for initiating to start new subjects. He suggested that Prof. Nandini of Bangalore University is an exponent in the field of Environment Studies and her expertise could be used for Advisory Committee<br><br>Smt. Jyothi Vijay mentioned that, experts of the industry and corporate background are to be involved. The persons of high vision and competence are to be engaged to take forward these courses.<br><br>The Vice-Chancellor while concluding the discussion informed that, when he approached the Government of Karnataka with the list of 26 new Departments, the Addl. Chief Secretary, Finance Department informed that, the University should come out with specialised subjects rather than the subjects which are already in existence in other Universities. The present courses are inter-disciplinary in nature and research oriented in the new areas of knowledge. The expertise available in the industry need to be tapped to assist in teaching and research for these courses. We need to identify and appoint Co-ordinators who are specialized in these areas, with Ph.D and capable of looking into all dimensions, including industrial relations, placements identification of experts, infrastructure etc. We have to |

| | |
|---|---|
| | constitute an Advisory Committee for each of these courses. He detailed about the consultations he had with experts in these areas before taking the proposal to the Government and requested the Syndicate to approve for appointment of Co-ordinators.<br><br>**Resolution:**<br><br>**The Syndicate resolved to approve for appointment of Co-ordinators with competency for a period of three months to prepare a feasibility report for launching 5 new P.G courses viz., (1) Environment and Climate Change (2) Technology (3) Urban Studies and Planning (4) Arts & Aesthetics and (5) Law and Public Policy. The feasibility report shall be placed before the Academic Council and then to the Syndicate for consideration.** |
| ವಿಷಯ ಸಂಖ್ಯೆ– 13: | ದಿನಾಂಕ 07.01.2020 ಕ್ಕೆ 70 ವರ್ಷ ಪೂರ್ಣಗೊಳಿಸಿರುವ ನಿವೃತ್ತ ಅಧಿಕಾರಿಯ ಸೇವಾ ಮುಂದುವರಿಕೆ –ಬಗ್ಗೆ.<br><br>ಕುಲಸಚಿವರು, ವಿಷಯ ಪ್ರಸ್ತಾಪಿಸಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಿದಂತೆ ಕುಲಚಿವರ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಶ್ರೀ ನಟರಾಜ್ ಅವರ ಸೇವೆಯನ್ನು ಮುಕ್ತಾಯಗೊಳಿಸಲಾಗಿದ್ದು, ಅವರ ಸ್ಥಳದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಉಪಕುಲಸಚಿವರಾದ ಶ್ರೀ ಬಿ. ಈಶ್ವರಾಚಾರಿ ಇವರನ್ನು ನೇಮಕ ಮಾಡಲಾಗಿದೆ. ಪ್ರಸ್ತುತ ಕುಲಪತಿಗಳ ಕಛೇರಿಯಲ್ಲಿ ವಿಶೇಷಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಪಿ. ನಾಗರಾಜ್ ಇವರಿಗೆ ದಿನಾಂಕ: 07.01.2020 ಕ್ಕೆ 70 ವರ್ಷ ಪೂರ್ಣಗೊಳ್ಳುವುದರಿಂದ ಹಾಗೂ ವಿಶ್ವವಿದ್ಯಾಲಯದಲ್ಲಿ 43ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ಜರುಗುತ್ತಿರುವ ಹಿನ್ನಲೆಯಲ್ಲಿ ಶ್ರೀ ಪಿ. ನಾಗರಾಜ್ ಅವರ ಸೇವೆಯನ್ನು 31–01–2020 ರ ವರೆಗೆ ಮುಂದುವರೆಸಲು ವಿಷಯ ಮಂಡಿಸಿದರು.<br><br>**ಸಿಂಡಿಕೇಟ್ ತೀರ್ಮಾನ:**<br><br>**ಶ್ರೀ ಪಿ. ನಾಗರಾಜ್, ವಿಶೇಷಾಧಿಕಾರಿಗಳು ಕುಲಪತಿಗಳ ಕಾರ್ಯಾಲಯ ಇವರ ಸೇವೆಯನ್ನು 31.01.2020 ರ ವರೆಗೆ ಮುಂದುವರೆಸಲು ತೀರ್ಮಾನಿಸಲಾಯಿತು.** |
| ಸಾಮಾನ್ಯ ಚರ್ಚೆ | Registrar informed the Syndicate that a meeting of the Committee to evaluate existing tools relating to Affiliation process is convened on 13.01.2020 as per the notification. In view of the objection sent by members regarding the decision of the Syndicate and constitution of Committee, he sought the |

| | |
|---|---|
| | permission of the Syndicate to conduct the meeting as per the notification. Smt. Jyothi Vijay who has sent the objection informed that, she has sent general and specific objections, the same are to be discussed in the ordinary meetings of the Syndicate. However, since the Registrar has brought the matter before the Syndicate, she read out the following correction to the decision to Item No 12 of the Syndicate Proceedings of 23.12.2019.<br><br>"A committee is formed to evaluate the existing tool for digitization of the affiliation process and exploration of a suitable IT services solution for the same with the following members:<br>1. The Registrar – as Chairman of the Committee<br>2. Prof. M. Pandurangappa<br>3. Dr. R. Parvathi<br>4. Smt. Jyothi Vijay<br>5. Sri. D G Srinivasa Murthy<br>6. Dr. Asha Ganesh<br>7. One representative form NIC "<br><br>**Resolution:**<br><br>**The Syndicate resolved to modify sthe decision as follows:**<br>**A Committee is formed to evaluate the existing tool for digitization of the affiliation process and exploration of a suitable IT services solution for the same with the following members:**<br>**1. The Registrar – as Chairman of the Committee**<br>**2. Prof. M. Pandurangappa**<br>**3. Dr. R. Parvathi**<br>**4. Smt. Jyothi Vijay**<br>**5. Sri. D G Srinivasa Murthy**<br>**6. Dr. Asha Ganesh**<br>**7. One representative form NIC** |

| | |
|---|---|
| | **It was made clear that, the members suggested in the Item No: 5 of today's agenda relating to standardising the tool including all the parameters both for fresh and renewal of Research Centres, would be additional members of the Committee. The reconstitution of the committee should be done accordingly.** |

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು

ಕುಲಸಚಿವರು 18/1/2020
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ